# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 186 |
| 2 | ಸದಸ್ಯರ ಹೆಸರು | : | ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 06-07-2023 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚಿಗೆ ಬೆಂಗಳೂರಿನಲ್ಲಿ ಬಿದ್ದಂತಹ ಮಳೆಯಿಂದ ಅಂಡರ್‌ಪಾಸ್‌ಗಳು, ರಸ್ತೆ ಹಾಗೂ ಚರಂಡಿಗಳು ಹೆಚ್ಚಿನ ರೀತಿಯಲ್ಲಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಈ ಪ್ರಮುಖ ಸಮಸ್ಯೆಗಳನ್ನು ನಿವಾರಿಸಲು ಬಿಬಿಎಂಪಿ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ಹಾಗೂ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಈ ಸಮಸ್ಯೆಗಳ ನಿವಾರಣೆಗೆ ಬಿಬಿಎಂಪಿಯಿಂದ ವಹಿಸಿರುವ ಕಾಮಗಾರಿಗಳು ಮತ್ತು ಅನುದಾನದ ವಿವರಗಳು ಕೆಳಗಿನಂತಿವೆ.<br>• ಕೆಳಸೇತುವೆಗಳನ್ನು ನಿರ್ದಿಷ್ಟವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಹಾಗೂ ಅಗತ್ಯಕ್ಕೆ ತಕ್ಕಂತೆ ಹೆಚ್ಚುವರಿ ದುರಸ್ಥಿ ಕಾರ್ಯವನ್ನು ಕೈಗೊಳ್ಳಲು ಆಯಾ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ.<br>• ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಆರ್ಟೀರಿಯಲ್, ಸಬ್-ಆರ್ಟೀರಿಯಲ್, ಇತರೆ ಪ್ರಮುಖ ರಸ್ತೆಗಳ ಚರಂಡಿಗಳಿಂದ ನಿಯತಕಾಲಿಕವಾಗಿ ಹೂಳನ್ನು ತೆಗೆದು ಮಳೆನೀರು ಸರಾಗವಾಗಿ ಹರಿಯುವಂತೆ ಮಾಡಲು ಎಲ್ಲಾ ವಲಯದ ಮುಖ್ಯ ಅಭಿಯಂತರರುಗಳಿಗೆ ಮತ್ತು ಅವರ ಅಧೀನದಲ್ಲಿ ಬರುವ ಅಭಿಯಂತರರುಗಳಿಗೆ ಸೂಚನೆ ನೀಡಲಾಗಿರುತ್ತದೆ.<br>• ಮುಂದುವರೆದು, ಸಂಚಾರ ಪೊಲೀಸ್ ಇಲಾಖೆಯಿಂದ ಆಗಿಂದಾಗ್ಗೆ ಗುರುತಿಸಲಾಗುವ ನೀರು ನಿಲ್ಲುವ ಸ್ಥಳಗಳ ಸಮಸ್ಯೆಗಳನ್ನು ಪರಿಹರಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | • ರಾಜಕಾಲುವೆಗಳಲ್ಲಿ ನಿಯತಕಾಲಿಕವಾಗಿ ಹೂಳನ್ನು ತೆಗೆಯಲು "ವಾರ್ಷಿಕ ರಾಜಕಾಲುವೆಗಳ ನಿರ್ವಹಣೆ ಯೋಜನೆ" ಯಡಿ 28 ವಿಧಾನ ಸಭಾ ಕ್ಷೇತ್ರಗಳಿಗೆ ಪ್ರತ್ಯೇಕವಾಗಿ ಗುತ್ತಿಗೆದಾರರನ್ನು ನೇಮಿಸಿ ಹೂಳನ್ನು ತೆಗೆಯುವ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ.<br><br>• ಬೆಂಗಳೂರು ಮಹಾನಗರದ ಆರ್ಟೀರಿಯಲ್, ಸಬ್-ಆರ್ಟೀರಿಯಲ್ ಹಾಗೂ ಇತರೆ ಪ್ರಮುಖ ರಸ್ತೆಗಳಲ್ಲಿ ಬಿದ್ದಂತಹ ಗುಂಡಿಗಳನ್ನು ಕೋಲ್ಡ್‌ಮಿಕ್ಸ್ ಆಸ್ಫಾಲ್ಟ್ (ಕೋಲ್ಡ್ ಮಿಕ್ಸ್ ಡಾಂಬರು) ಬಳಸಿ ದುರಸ್ಥಿಪಡಿಸಲಾಗುತ್ತಿದೆ. ಈ ನಿರ್ವಹಣಾ ಕಾಮಗಾರಿಗಳನ್ನು ನಿರ್ವಹಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರತ್ಯೇಕವಾಗಿ ಎಸ್ಕ್ರೋ ಖಾತೆಯನ್ನು ತೆರೆಯಲಾಗಿರುತ್ತದೆ. ಸದರಿ ಎಸ್ಕ್ರೋ ಖಾತೆಯಲ್ಲಿ ಅಗತ್ಯಕ್ಕೆ ಮತ್ತು ಸಂದರ್ಭಾನುಸಾರ ಅನುದಾನವನ್ನು ನಿಗಧಿಪಡಿಸಲಾಗುತ್ತಿದೆ.<br><br>• 2023-24ನೇ ಸಾಲಿನಲ್ಲಿ ರಸ್ತೆ ಮೂಲಭೂತ ಸೌಕರ್ಯ ವಿಭಾಗಕ್ಕೆ ರಸ್ತೆ ಗುಂಡಿ ಮುಚ್ಚಲು ರೂ.20.00 ಕೋಟಿಗಳು, ವಾರ್ಡ್ ಮಟ್ಟದ ರಸ್ತೆಗಳ ಗುಂಡಿ ನಿರ್ವಹಣೆಗಾಗಿ ರೂ.36.45 ಕೋಟಿಗಳು ಹಾಗೂ ರಾಜಕಾಲುವೆ (ಚರಂಡಿ) ನಿರ್ವಹಣೆಗಾಗಿ ರೂ.38.50 ಕೋಟಿಗಳ ಅನುದಾನವನ್ನು ನೀಡಲಾಗಿರುತ್ತದೆ. |

**ಸಂಖ್ಯೆ: ನಅಇ 270 ಎಂಎನ್‌ವೈ 2023 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ